ಕಟ್ಟಡದಲ್ಲಿ ಪೋಲೀಸ್ ಕಮಿಷನರ್ ಕಛೇರಿಯನ್ನು ಪ್ರಾರಂಭ ಮಾಡಿರುವುದು ನಾನು ಗೃಹ ಮಂತ್ರಿಯಾದ ಮೇಲೆ. ಇದು ತಮಗೂ ಗೊತ್ತಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಈಗಾಗಲೇ 3 ಕಡೆಗೆ ಕಮಿಷನರ್ ಕಛೇರಿ ಷಿಫ್ಟ್ ಆಗಿದೆ. ನಾನು ಕೇಳುತ್ತಿರುವುದು ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಕಮಿಷನರ್ ಕಚೇರಿ ಕಟ್ಟಿಸಬೇಕು. ಇದಕ್ಕೆ ಜಾಗದ ಅವಕಾಶ ಇದೆ. ಮಧ್ಯದಲ್ಲಿ ಕಟ್ಟಿಸುತ್ತೀರಾ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ನೀವು ಚರ್ಚೆ ಮಾಡಿ ಹಣಕಾಸಿನ ಪರಿಸ್ಥಿತಿ ನೋಡಿ ಮಾಡಿ.

ಬೆಂಗಳೂರು ನಗರದಲ್ಲಿ ಮಹಿಳಾ ಪೋಲೀಸ್ ಕಾನಸ್ಟೇಬಲಗಳು ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳು.

78 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಮಹಿಳಾ ಪೋಲೀಸ್ ಕಾನ್ಸ್‌ಟೇಬಲ್ ಹಾಗೂ ಸಬ್-ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು.

ಆ) ಇದು ಈಗಿನ ಹೆಚ್ಚುತ್ತಿರುವ ಅವಶ್ಯಕತೆಗೆ ಅನುಗುಣವಾಗಿದೆಯೆ.

ಇ) ಬೆಂಗಳೂರು ನಗರದಲ್ಲಿ ಮಹಿಳಾ ಪೋಲೀಸ್ ಕಾನ್ಸಟೇಬಲ್ ಹಾಗೂ ಪೋಲೀಸ್ ಸಬ್-ಇನ್ಸಪೆಕ್ಟರ್ ಸಂಖ್ಯೆಯನ್ನು ಹೆಚ್ಚಿಸಲು ಯಾವುದಾದರೂ ಪ್ರಸ್ತಾವನೆ ಇದೆಯೇ.

ಈ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಒಟ್ಟು ಮಹಿಳಾ ಕಾನ್ಸ್‌ಟೇಬಲ್‌ಗಳು - 113

ಒಟ್ಟು ಮಹಿಳಾ ಸಬ್-ಇನ್ಸ್‌ಪೆಕ್ಟರ್‌ಗಳು - 23

ಆ) ಇಲ್ಲ.

ಇ) ಹೌದು.

ಈ) 6 ಮಹಿಳಾ ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು 261 ಮಹಿಳಾ ಪೋಲೀಸ್ ಕಾನ್ಸಟೇಬಲ್ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

12.00 ಪಿ.ಎಂ

ಶ್ರೀಮತಿ ಡಿ.ಜಿ. ಹೇಮಾವತಿ : ಇದನ್ನು ಯಾವತ್ತು ಮಾಡುತ್ತೀರಾ ಅದಷ್ಟು ಬೇಗನೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಹಿಳಾ ಪೋಲೀಸ್ ಸ್ಟೇಷನ್‌ಗಳನ್ನು ಹೆಚ್ಚು ಮಾಡಬೇಕಾದರೆ ಇದಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆ. ಇವತ್ತು ನಾವು ಸಿಬ್ಬಂದಿಯನ್ನು ನೇಮಕ ಮಾಡಿದರೂ ಕೂಡ ತರಬೇತಿಯಾಗಿ ಇವರು ತಮ್ಮ ಸ್ಥಾನಗಳನ್ನು ತುಂಬಿ ಒಟ್ಟಾಗಿ ಕೆಲಸ ಪ್ರಾರಂಭ

ಮಾಡಬೇಕಾದರೆ ಕೊನೇ ಪಕ್ಷ ಒಂದೂವರೆ ವರ್ಷಬೇಕಾಗುತ್ತದೆ. ಮಹಿಳಾ ಪೋಲೀಸ್ ಠಾಣೆ ಬೆಂಗಳೂರಿನಲ್ಲಿ ಒಂದು ಮಾತ್ರ ಇದೆ. ಒಂದು ಮಹಿಳಾ ಕೌನ್ಸಿಲಿಂಗ್ ಸೆಂಟರ್ ಇದೆ. ಪ್ರತಿಯೊಂದು ಎಸ್.ಪಿ. ಕಚೇರಿಯಲ್ಲೂ ರಾಜ್ಯದಾದ್ಯಂತ 20 ಡಿಪಿಒಗಳಲ್ಲಿ ಅಂದರೆ ಎಸಪಿ ಕಛೇರಿಗಳಲ್ಲಿ ಒಂದು ವಿಮೆನ್ ಕೌನ್ಸಿಲಿಂಗ್ ಸೆಂಟರ್‌ಗಳನ್ನು ಮಹಿಳೆಯರ ಸಮಸ್ಯೆಗಳಿಗೋಸ್ಕರವಾಗಿ ಪ್ರಾರಂಭ ಮಾಡತಕ್ಕಂತಹ ವಿಚಾರ ಸರಕಾರದ ಪರಿಶೀಲನೆಯಲ್ಲಿ ಇದೆ. ಎಲ್ಲ ಜಿಲ್ಲೆಗಳಲ್ಲೂ ಕಕಕೊನೇ ಪಕ್ಷ ಒಂದು ಮಹಿಳಾ ಪೋಲೀಸ್ ಠಾಣೆ ಪ್ರಾರಂಭ ಮಾಡಬೇಕೆಂಬ ವಿಚಾರವೂ ಸರಕಾರದ ಪರಿಶೀಲನೆಯಲ್ಲಿದೆ. ನನ್ನ ಸಹೋದರಿ ಹೇಮಾವತಿಯವರು ಏನು ಹೇಳುತ್ತಿದ್ದಾರೆಂದರೆ ಬೆಂಗಳೂರು ನಗರಕ್ಕೆ ಸೀಮಿತವಾಗಿ ಈಗ ಇರತಕ್ಕಂಥಾದ್ದು ಒಂದೇ ಒಂದು ಇದೆ ಎಂದು ಹೇಳುತ್ತಿದ್ದಾರೆ. 4 ರೇಂಜಗಳಲ್ಲಿ ಒಂದೊಂದು ಮಹಿಳಾ ಪೋಲೀಸ್ ಠಾಣೆಯನ್ನು ಮಾಡಬೇಕೆಂಬ ಪ್ರಸ್ತಾವನೆ ಸರಕಾರದ ತೀವ್ರವಾದ ಪರಿಶೀಲನೆಯಲ್ಲಿದೆ ಎಂಬ ಭರವಸೆಯನ್ನು ಕೊಡುತ್ತೇನೆ. ಮಹಿಳಾ ಪ್ರತ್ಯೇಕವಾಗಿ ಮಹಿಳಾ ಪೋಲೀಸ್ ಠಾಣೆಗಳಿಗೆ ಆಗಬೇಕಾಗಿರುವುದು ಮಹಿಳೆಯರಿಗೋಸ್ಕರ ಬಹಳ ಮುಖ್ಯವಾಗಿ ಆಗಬೇಕಾಗಿರುವುದು ರೆಕ್ರೂಟಮೆಂಟ್ ಆಫ್ ವಿಮೆನ್ಸ ಕಾನ್ಸಟೇಬಲ್ಸಿ ಮತ್ತು ರೆಕ್ರೂಟ್‌ಮೆಂಟ್ ಆಫ್ ವಿಮೆನ್ಸ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ಸ್ ಈ ತಿಂಗಳಲ್ಲೇ ವಿಚಾರದಲ್ಲಿ ಈಗಾಗಲೇ ಪ್ರಸ್ತಾವನೆ ಪ್ರಾರಂಭ ಮಾಡಿದ್ದೇನೆ. 20 ಮಹಿಳಾ ಪೋಲೀಸ್ ಸಬ್ ಇನ್ಸಪೆಕ್ಟರ್‌ಗಳನ್ನು ಪಿ.ಎಸ್.ಐ.ಗಳನ್ನು ರೆಕ್ರೂಟ್ ಮಾಡುತ್ತಿದ್ದೇವೆ. ಮಂಜೂರಾಗಿರತಕ್ಕಂತಹ ಮಹಿಳಾ ಪೋಲೀಸ್ ಕಾನ್ಸಟೇಬಲ್ಸ್‌ಗಳ ಖಾಲಿ ಇರತಕ್ಕಂತಹ ಜಾಗವನ್ನು ಭರ್ತಿ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಬೇರೆ ಯಾರಾದರೂ ಮಹಿಳಾ ಸದಸ್ಯರು ಕೇಳುತ್ತೀರೋ?

ಶ್ರೀಮತಿ ಪ್ರೆಮೀಳಾ ನೇಸರ್ಗಿ : ಈಗ ಬೆಂಗಳೂರಿನಲ್ಲಿರತಕ್ಕಂಥ ಒಂದು ಪೋಲೀಸ್ ಸ್ಟೇಷನ್ ಏನು ಇದೆ ಅಲ್ಲಿ ಯಾವುದೇ ವಿಧವಾದ ಸೌಲಭ್ಯಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಹಿಳಾ ಪ್ರಶ್ನೆಯನ್ನು ಮಹಿಳೆಯರೇ ಕೇಳಬೇಕು ಎಂದು ಹೇಳಿದಿರಿ ಇದು ನ್ಯಾಯವೇ ಯಾರಾದರೂ ಮಹಿಳೆಯರು ಇದ್ದರೆ ಮತ್ತೊಂದು ಸಲ ಕೇಳಿ ಎಂದು ಹೇಳಿದಿರಿ. ನನಗೆ ಅವಕಾಶ ಕೊಟ್ಟರೆ ಕೇಳುತ್ತೇನೆ.

ಅಧ್ಯಕ್ಷರು : ಕನ್ನಡದಲ್ಲಿ ತಾವು ಪರಿಣಿತಿ ಇರುವವರು. ಹೆಣ್ಣುಮಕ್ಕಳು ಯಾರಾದರೂ ಕೇಳುತ್ತೀರಾ ಎಂದು ಕೇಳಿದೆ. ಯಾರಾದರೂ ಹೆಣ್ಣುಮಕ್ಕಳು ಕೇಳುತ್ತೀರಾ ಎಂದು ಹೇಳಲಿಲ್ಲ. ಹೆಣ್ಣುಮಕ್ಕಳ ಪೈಕಿ ಯಾರಾದರೂ ಕೇಳುತ್ತೀರಾ ಎಂದು ಕೇಳಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ನನ್ನದೊಂದು ಕ್ರಿಯಾಲೋಪ ಹೆಣ್ಣುಮಕ್ಕಳು ಯಾರಾದರೂ ಕೇಳುತ್ತೀರಾ ಎಂದು ಹೇಳಿದ್ದಕ್ಕೆ ನಾಗರಾಜರು ಎದ್ದರಲ್ಲ ಇದು ಯಾವ ರೀತಿಯ ಲೆಕ್ಕ.

ಅಧ್ಯಕ್ಷರು : ಬಂಗಾರಪ್ಪನವರು ಬಂದಿದ್ದರೆಂದು ಅವರು ಎದ್ದು ನಿಂತಿದ್ದರು ಇನ್ನು ನಿಲ್ಲುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯರು ಯಾರಾದರೂ ಇದ್ದರೆ ಎಂದು ಈ ಕಡೆ ಆ ಕಡೆ ಹೀಗೆ ಅನ್ನುತ್ತಿದ್ದಿರಿ. ಇದು ಅತ್ಯಂತ ನೋವಿನ ಪ್ರಸಂಗ. ಮಹಿಳೆಯರ ಪರವಾಗಿ ಪುರುಷರು ಕೇಳಲೇಬಾರದೆಂದು ನಿಮಗೆ ಮಾನ್ಯ ಪಟೇಲರಿಗೇನಾದರೂ ಇದೆಯೋ ಕೆಲವು ಸಂದರ್ಭದಲ್ಲಿ ಮಹಿಳೆಯರ ಬಗ್ಗೆ ಪ್ರೀತಿ ವಿಶ್ವಾಸ ಉಂಟು.

ಶ್ರೀ ಜೆ.ಎಚ್. ಪಟೇಲ್ : ತಾವೇ ಸ್ವತಃ ಅರ್ಧ ನಾರೀಶ್ವರರು. ಯಾರ ಬಗ್ಗೆಯಾದರೂ ಪ್ರಶ್ನೆ ಕೇಳಬಹುದು.

ಶ್ರೀಮತಿ ಪ್ರೆಮೀಳಾ ನೇಸರ್ಗಿ : ಹೆಣ್ಣುಮಕ್ಕಳು ಇರುವವರು ಎಲ್ಲರೂ ಕೇಳಬಹುದು ಎಂದು ಹೇಳಬೇಕಾಗಿತ್ತು. ಯಾರ್ಯಾರ ಮನೆಯಲ್ಲಿ ಹೆಣ್ಣುಮಕ್ಕಳಿದ್ದಾರೋ ಅವರೆಲ್ಲ ಕೇಳಬಹುದು. ಈಗ ಇರತಕ್ಕಂತಹ ಮಹಿಳಾ ಪೋಲೀಸ್ ಠಾಣೆ ಏನು ಇದೆ ಅಲ್ಲಿ ಯಾವುದೇ ವ್ಯವಸ್ಥೆಯನ್ನು ಇದುವರೆಗೂ ಮಾಡಿಲ್ಲ. ಎಸ್.ಐ.ಯವರು ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆಯಿಲ್ಲ. ನಾವು ಪೋಲಿಸ್ ಠಾಣೆಗೆ ಹೋಗಿದ್ದೇವೇ ಎಂದು ಹೇಳತಕ್ಕಂತಹ ಪರಿಸ್ಥಿತಿ ಒದಗಿ ಬಂದಿದೆ. ನಾನು ಹಲವಾರು ಬಾರಿ ಮಹಿಳೆಯರ ಕಷ್ಟಸುಖಗಳನ್ನು ಕೇಳುವುದಕ್ಕೆ ಅಲ್ಲಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಕುಳಿತುಕೊಳ್ಳುವುದಕ್ಕೆ ಸ್ಥಳ ಇಲ್ಲ. ಅವರನ್ನು ಕೇಳುವ ಪರಿಸ್ಥಿತಿ ಕೂಡ ಇವತ್ತು ಇಲ್ಲ. ಆದ್ದರಿಂದ ನೀವು ಇಲ್ಲಿ 20 ಪೋಲೀಸ್ ಸ್ಟೇಷನ್ ತೆಗೆಯುತ್ತೇನೆ ಎಂದು ಹೇಳುತ್ತಿದ್ದೀರಿ. ಇದೇ ರೀತಿ ಮಹಿಳಾ ಪೋಲೀಸ್ ಸ್ಟೇಷನ್ ತೆಗೆಯುವುದಾದರೆ ಅದರಿಂದ ಯಾವುದೇ ಪ್ರಯೋಜನ ಯಾರಿಗೂ ಕೂಡ ಆಗುವುದಿಲ್ಲ. ದಯವಿಟ್ಟು ತಾವು ಬೇರೆ ಪೋಲೀಸ್ ಸ್ಟೇಷನಗಳಿಗೆ ಐಜಿಪಿ ಆಫೀಸನಲ್ಲಿ ಮತ್ತು ಕಮಿಷನರ್ ಆಫೀಸಗಳಲ್ಲಿ ನೀವು ಯಾವ ರೀತಿ ವ್ಯವಸ್ಥೆ ಮಾಡಿದ್ದೀರೋ ಆ ರೀತಿ ಮಹಿಳಾ ಪೋಲೀಸ್ ಸ್ಟೇಷನಗಳನ್ನು ತೆಗೆಯುವುದಕ್ಕೆ ತಾವೇನಾದರೂ ವ್ಯವಸ್ಥೆ ಮಾಡುತ್ತೀರೋ ಅದಕ್ಕೆ ಬೇಕಾದ ಸಲಕರಣೆಗಳನ್ನೆಲ್ಲ ಒದಗಿಸುವುದಕ್ಕೆ ಸಿದ್ಧರಾಗಿದ್ದೀರಾ ಎನ್ನುವ ಪ್ರಶ್ನೆಯನ್ನು ಇವತ್ತು ನಿಮಗೆ ಕೇಳುತ್ತಿದ್ದೇನೆ. ಅದನ್ನು ಮಾಡುವುದಾದರೆ ಮಾತ್ರ ತೆಗೆಯಿರಿ. ಇಲ್ಲದಿದ್ದರೆ ಆ ಪರಿಸ್ಥಿತಿಯನ್ನು ತಂದು ಹೆಣ್ಣುಮಕ್ಕಳನ್ನು ಹೋಗಿ ಅಲ್ಲಿ ಇನ್ನೊಂದು ಜೈಲಿನಲ್ಲಿ ಇರುವಂಥ ಪರಿಸ್ಥಿತಿ ಮಾತ್ರ ದಯವಿಟ್ಟು ಮಾಡಬೇಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಸುಸಜ್ಜಿತ ವ್ಯವಸ್ಥೆ ಆಗಬೇಕು ಎಂದು ತಾವು ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನನಗೆ ಸ್ವಲ್ಪ ಅಪ್ಪಣೆ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಗೌರವಾನ್ವಿತ ಮಾನ್ಯ ಸದಸ್ಯರು ಹೇಳಿರುವ ವಿಚಾರ ಏನು ಇದೆ, ಇದು ಸತ್ಯಕ್ಕೆ ದೂರವಾಗಿರತಕ್ಕಂಥದ್ದು. ಮಹಿಳಾ ಪೋಲೀಸ್ ಸ್ಟೇಷನಗಳಲ್ಲಿ, ಸಬ್ ಇನ್ಸ್‌ಪೆಕ್ಟರಗಳಿಗೆ, ಇನ್ಸಪೆಕ್ಟರ್‌ಗಳಿಗೆ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಎಲ್ಲಾ ವ್ಯವಸ್ಥೆ ಇದೆ. ಆದರೆ ಇರತಕ್ಕಂಥ ವ್ಯವಸ್ಥೆ ಬಗ್ಗೆ ನನಗೂ ಸಹಿತ ಸಂಪೂರ್ಣವಾಗಿ ಸಮಾಧಾನ ಇಲ್ಲ. ಎಲ್ಲಾ ಮಹಿಳೆಯರು ಬಂದು ಅವರ ಕಷ್ಟಸುಖಗಳನ್ನು ಮತ್ತು ಅವರ ಕೆಲವು ಸಮಸ್ಯೆಗಳನ್ನು, ಕಂಪ್ಲೆಂಟ್‌ಗಳನ್ನು ಹೇಳಿದ್ದಾರೆ. ಈಗ ಬೆಂಗಳೂರು ನಗರದಲ್ಲಿ ಒಂದೇ ಒಂದು ಇರುವುದು. ಅಲ್ಲೆಲ್ಲೋ ದೂರದಲ್ಲಿ 25

ಕಿಲೋಮೀಟರ್ ದೂರದಲ್ಲಿ ಇರುವವರು ಬಂದು ಹೇಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದರೆ ಅದಕ್ಕೆ ನಾನು ಭರವಸೆ ಕೊಡುತ್ತೇನೆ, ಈ ಅಧಿವೇಶನದ ನಂತರ ಗೌರವಾನ್ವಿತ ಎಲ್ಲಾ ಮಹಿಳಾ ಸದಸ್ಯರನ್ನು ನಾನು ಕರೆದು ಪ್ರತ್ಯೇಕವಾಗಿ ಇದರ ಬಗ್ಗೆ ಒಂದು ಸಭೆ ನಡೆಸಿ ಅವರ ಸಲಹೆಗಳನ್ನು ಸಹಾ ತೆಗೆದುಕೊಂಡು ಈ ಪೋಲೀಸ್ ಸ್ಟೇಷನ್‌ಗಳ ಸುಧಾರಣೆಯನ್ನು ಮಾಡುವುದಕ್ಕೆ ಒಂದು ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಎರಡು ವಿಚಾರ ಇಲ್ಲಿ ಉದ್ಭವವಾಯಿತು. ಬರೀ ಮಹಿಳಾ ಸದಸ್ಯರನ್ನೆ ಕರೆಮು ಇದರ ಬಗ್ಗೆ ನಾವು ವಿಚಾರ ಮಾಡುತ್ತೇವೆ ಎಂದು. ಏನು ಪುರುಷರನ್ನು ಕರೆಯುವ ಅಭ್ಯಾಸವನ್ನೇ ಇಟ್ಟುಕೊಂಡಿಲ್ಲವೇ? ಈ ಬಗ್ಗೆ ಮಹಿಳೆಯರ ಬಗ್ಗೆ ವಿಚಾರ ಮಾಡುವುದಕ್ಕೆ, ಮಹಿಳೆಯರ ಕಲ್ಯಾಣದ ಬಗ್ಗೆ ಮಾತನಾಡುವುದಕ್ಕೆ ಪುರುಷರಿಗೆ ಹಕ್ಕಿಲ್ಲವೇ ಎನ್ನುವುದು ಒಂದು ಪ್ರಶ್ನೆ. ಮತ್ತು ಈ ಮಹಿಳಾ ಪೋಲೀಸರಿಗೆ ಕೊಟ್ಟಿರುವ ಉಡುಪುಗಳು ಯಾವುವು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇವೆರಡೂ ಪ್ರಶ್ನೆಗಳಿಗೆ ಉತ್ತರವನ್ನು ಪ್ರತ್ಯೇಕವಾಗಿ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ತನಿಕೆ ಮಾಡುವುದು ಏನು ಇದೆ? ಪ್ರಾಮುಖ್ಯವಾದ ವಿಚಾರ ನಾನು ಕೇಳುತ್ತಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಉಡುಪುಗಳ ಬಗ್ಗೆ ಕೇಳಿದ್ದಾರೆ. ಆ ಉಡುಪುಗಳ ಬಗ್ಗೆ ನನಗೆ ಗೊತ್ತಿಲ್ಲ. ವಾಸ್ತವಾಂಶ ನಾನು ಹೇಳುತ್ತಿದ್ದೇನೆ, ಅದೇನೇನು ಉಡುಪು ಕೊಡುತ್ತಾರೆ ಮಹಿಳಾ ಪೋಲೀಸನವರಿಗೆ ಎನ್ನುವುದು ಪ್ಯಾಂಡ್, ಶರ್ಟಿನ ಜೊತೆಗೆ ಇನ್ನೇನು ಕೊಡುತ್ತಾರೆ ಎನ್ನುವುದನ್ನು ತಿಳಿದುಕೊಂಡು ಪ್ರತ್ಯೇಕವಾಗಿ ನಾನು ತಿಳಿಸುತ್ತೇನೆ. ಎಷ್ಟು ಕೊಡುತ್ತಾರೆ. ಏನು ಕೊಡುತ್ತಾರೆ ಎನ್ನುವುದನ್ನು ತಿಳಿಸುತ್ತೇನೆ.

ಅಧ್ಯಕ್ಷರು : ಹಾಗಾದರೆ ಇದನ್ನು ಅಲ್ಲಿಗೆ ನಿಲ್ಲಿಸೋಣ.

ಬೆಂಗಳೂರು ನಗರದ ಸುತ್ತಮುತ್ತಲ ವರ್ತುಲ ರಸ್ತೆ.

79 - ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತ ವೃತ್ತಾಕಾರ ರಸ್ತೆ (ರಿಂಗರೋಡ್) ನಿರ್ಮಿಸುವ ಯೋಜನೆ ಯಾವ ಹಂತದಲ್ಲಿದೆ.

ಆ) ಹಾಗಿದ್ದಲ್ಲಿ ವೃತ್ತಾಕಾರ ರಸ್ತೆ (ರಿಂಗ್ ರೋಡ್) ನಿರ್ಮಿಸಲು ಸರ್ಕಾರದವರು ಕಾಲಮಿತಿ ಏನಾದರೂ ಹಾಕಿಕೊಂಡಿರುವರೆ?

ಇ) ಓ.ಎಂ.ಬಿ.ಆರ್. ಹಾಗೂ ಈಸ್ಟ್ ಆಫ್ ಎನ್.ಜಿ.ಇ.ಎಫ್., ಬಿ.ಡಿ.ಎ. ಬಡಾವಣೆಗಳಲ್ಲಿ ಹಾದುಹೋಗಿರುವ ವೃತ್ತಾಕಾರದ ರಸ್ತೆ (ರಿಂಗ್ ರೋಡ್) ಯು, ಹಳೇ ಮದ್ರಾಸ್